# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1856
ಮಾನ್ಯ ಸದಸ್ಯರ ಹೆಸರು : ಶ್ರೀ ಸಿ.ಎಂ. ಇಬ್ರಾಹಿಂ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವವರು : ಮಾನ್ಯ ಗಣಿ ಮತ್ತು ಭೂವಿಜ್ಞಾನ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರು
ಉತ್ತರಿಸಬೇಕಾದ ದಿನಾಂಕ : 15.03.2022

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರವು ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ರೂಪಿಸಿರುವ ಯೋಜನೆಗಳು ಯಾವುವು; ಈ ಯೋಜನೆಗಳನ್ನು ತಲುಪಿಸುವ ನಿಟ್ಟಿನಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು) | ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಮೂಲಕ ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ಈ ಕೆಳಕಂಡ ಯೋಜನೆಗಳನ್ನು ರೂಪಿಸಲಾಗಿದೆ.<br>1. ಉದ್ಯೋಗಿನಿ ಯೋಜನೆ<br>2. ಕಿರುಸಾಲ ಯೋಜನೆ<br>3. ಸಮೃದ್ಧಿ ಯೋಜನೆ<br>4. ಚೇತನ ಯೋಜನೆ<br>5. ಧನಶ್ರೀ ಯೋಜನೆ<br>6. ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆ<br>7. ಮಹಿಳಾ ತರಬೇತಿ ಯೋಜನೆ<br>8. ಬಡ್ಡಿ ಸಹಾಯಧನ ಯೋಜನೆ (ಕರ್ನಾಟಕ ರಾಜ್ಯ ಆರ್ಥಿಕ ಹಣಕಾಸು ನಿಗಮದ ಮೂಲಕ)<br>9. ದೇವದಾಸಿ ಪುನರ್ವಸತಿ ಯೋಜನೆ<br>10. ಮಾಜಿ ದೇವದಾಸಿಯರ ಮಾಸಾಶನ ಯೋಜನೆ<br>11. ಮಾಜಿ ದೇವದಾಸಿಯರ ವಸತಿ ಯೋಜನೆ<br>ಯೋಜನೆಗಳ ವಿವರವನ್ನು ಅನುಬಂಧ-(1ಎ) ರಲ್ಲಿ ಲಗತ್ತಿಸಿದೆ.<br><br>1. **ಸ್ತ್ರೀಶಕ್ತಿ ಯೋಜನೆ:-**<br>ಸ್ತ್ರೀಶಕ್ತಿ ಯೋಜನೆಯನ್ನು ರಾಜ್ಯದಲ್ಲಿ ಅಕ್ಟೋಬರ್ 2000 ರಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಮಹಿಳೆಯರನ್ನು ಸ್ತ್ರೀಶಕ್ತಿ ಗುಂಪುಗಳಲ್ಲಿ ಸಂಘಟಿಸುವುದರ ಮೂಲಕ ಆರ್ಥಿಕ ಹಾಗೂ ಸಾಮಾಜಿಕ ಸಶಕ್ತತೆಯನ್ನು ತರುವುದು ಯೋಜನೆಯ ಮುಖ್ಯ ಉದ್ದೇಶವಾಗಿದೆ.<br>ಈ ಯೋಜನೆಯಡಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ವಿವರವನ್ನು ಅನುಬಂಧ-(1ಬಿ) ರಲ್ಲಿ ಲಗತ್ತಿಸಿದೆ. |
| ಆ) | ಕಳೆದ ಮೂರು ವರ್ಷಗಳಲ್ಲಿ ಕೌಟುಂಬಿಕ, ಸಾಮಾಜಿಕ ಬೆಂಬಲವಿಲ್ಲದ ಹಾಗೂ ಪ್ರತ್ಯೇಕ ಆದಾಯವಿಲ್ಲದಂತಹ ಎಷ್ಟು ಮಹಿಳೆಯರಿಗೆ ನೆರವು ಹಾಗೂ ಪುನರ್ವಸತಿ ಕಲ್ಪಿಸಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು) | 1. **ಸ್ವಾಧಾರ ಗೃಹ ಯೋಜನೆ:-**<br>ಕೇಂದ್ರ ಪುರಸ್ಕೃತ ಸ್ವಾಧಾರ ಗೃಹ ಯೋಜನೆಯು ಸಂಕಷ್ಟ ಪರಿಸ್ಥಿತಿಯಲ್ಲಿರುವ ಮಹಿಳೆಯರಿಗೆ ಆಶ್ರಯ, ಆಹಾರ, ಬಟ್ಟೆ, ತರಬೇತಿ ಹಾಗೂ ಶಿಕ್ಷಣ ನೀಡುವುದರ ಮೂಲಕ ಸಶಕ್ತರನ್ನಾಗಿ ಮಾಡುವ ಉದ್ದೇಶ ಹೊಂದಿರುತ್ತದೆ. ಸ್ವಾಧಾರ ಗೃಹಗಳಲ್ಲಿ ಸಂತ್ರಸ್ಥ ಮಹಿಳೆಯರಿಗೆ ಕಾನೂನು ಸಲಹೆ, ಆಪ್ತ ಸಮಾಲೋಚನೆ, ವೃತ್ತಿ ಕೌಶಲ್ಯ ತರಬೇತಿ ಇತ್ಯಾದಿ ಸೌಲಭ್ಯ ಒದಗಿಸಲಾಗುತ್ತಿದೆ. ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ 52 ಸ್ವಾಧಾರ ಗೃಹಗಳಲ್ಲಿ ಮಹಿಳೆಯರಿಗೆ ಪುನರ್ವಸತಿ ಕಲ್ಪಿಸಲಾಗುತ್ತಿದೆ. ಕಳೆದ ಮೂರು ವರ್ಷಗಳಲ್ಲಿ ಪುನರ್ವಸತಿ ಪಡೆದ ಮಹಿಳೆಯರ ವಿವರ ಈ ಕೆಳಕಂಡಂತಿದೆ. |

<table>
<tr>
<td></td>
<td></td>
<td>
<table>
<tr><th>ಕ್ರ.ಸಂ.</th><th>ವರ್ಷ</th><th>ಪುನರ್ವಸತಿ ಪಡೆದ ಮಹಿಳೆಯರ ಸಂಖ್ಯೆ</th></tr>
<tr><td>1</td><td>2019–20</td><td>1351</td></tr>
<tr><td>2</td><td>2020–21</td><td>1298</td></tr>
<tr><td>3</td><td>2021–22</td><td>1272</td></tr>
</table>
<br>
<u>2. ಉಜ್ವಲ ಯೋಜನೆ:–</u>
<br><br>
ಕೇಂದ್ರ ಪುರಸ್ಕೃತ ಉಜ್ವಲ ಯೋಜನೆಯಡಿ ಸಾಗಾಣಿಕೆಗೆ ಹಾಗೂ ಲೈಂಗಿಕ ದುರುಪಯೋಗಕ್ಕೆ ಒಳಪಟ್ಟ ಮಹಿಳೆಯರು ಮತ್ತು ಮಕ್ಕಳಿಗೆ ರಕ್ಷಣೆ, ಪುರ್ನವಸತಿ ಹಾಗೂ ಕುಟುಂಬದವರೊಂದಿಗೆ ಪುನರ್ವಿಲೀನ ಕಲ್ಪಿಸಲಾಗುತ್ತಿದೆ.
<br><br>
ಉಜ್ವಲ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ಪುರ್ನವಸತಿ ಕಲ್ಪಿಸಿರುವ ಮಹಿಳೆಯರ ವಿವರ ಈ ಕೆಳಕಂಡಂತಿದೆ.
<br><br>
<table>
<tr><th rowspan="2">ಕ್ರಸಂ</th><th colspan="3">ಪುರ್ನವಸತಿ ಕಲ್ಪಿಸಿರುವ ಮಹಿಳೆಯರ ಸಂಖ್ಯೆ</th></tr>
<tr><th>2018-19</th><th>2019-20</th><th>2020-21</th></tr>
<tr><td>1.</td><td>1063</td><td>902</td><td>307</td></tr>
</table>
<br>
<u>3. ಸ್ವೀಕಾರ ಕೇಂದ್ರಗಳು ಮತ್ತು ರಾಜ್ಯ ಮಹಿಳಾ ನಿಲಯ:–</u>
<br><br>
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ನಡೆಸುತ್ತಿರುವ 4 ಸ್ವೀಕಾರ ಕೇಂದ್ರಗಳು(ಅಲ್ಪಾವಧಿ ಗೃಹ) ಮತ್ತು 8 ರಾಜ್ಯ ಮಹಿಳಾ ನಿಲಯ (ದೀರ್ಘಾವಧಿ ಗೃಹ)ಗಳಲ್ಲಿ ರಕ್ಷಣೆ ಮತ್ತು ಆಶ್ರಯಕ್ಕಾಗಿ ದಾಖಲಾಗುವ ಮಹಿಳೆಯರಿಗೆ ಕೌಶಲ್ಯಾಭಿವೃದ್ಧಿ ತರಬೇತಿ ಮತ್ತು ವೃತ್ತಿ ತರಬೇತಿ ನೀಡುವುದರ ಮೂಲಕ ಉದ್ಯೋಗ ಮತ್ತು ಸ್ವ–ಉದ್ಯೋಗಾವಕಾಶ ಕಲ್ಪಿಸಲಾಗುತ್ತಿದೆ.
<br>
ರಾಜ್ಯ ಮಹಿಳಾ ನಿಲಯ ಮತ್ತು ಸ್ವೀಕರ ಕೇಂದ್ರಗಳಲ್ಲಿ ಪುರ್ನವಸತಿ ಕಲ್ಪಿಸಿರುವ ಮಹಿಳೆಯರ ವಿವರ ಅನುಬಂಧ–2 ರಲ್ಲಿ ಲಗತ್ತಿಸಿದೆ.
</td>
</tr>
<tr>
<td>ಇ)</td>
<td>ರಾಜ್ಯದಲ್ಲಿ ಮಹಿಳೆಯರ ಮತ್ತು ಮಕ್ಕಳ ಅಕ್ರಮ ಸಾಗಾಣಿಕೆ ಪ್ರಕರಣಗಳು ಕಂಡುಬಂದಿದೆಯೇ; ಹಾಗಿದ್ದಲ್ಲಿ ಅಂತಹ ಪ್ರಕರಣಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು);</td>
<td>ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಣಿಕೆ ತಡೆ ಯೋಜನೆಯಡಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ನಿರ್ವಹಿಸಲಾಗುತ್ತಿದೆ. ಪ್ರಕರಣಗಳ ಜಿಲ್ಲಾವಾರು ವಿವರಗಳನ್ನು ಇಲಾಖೆಯಡಿ ನಿರ್ವಹಿಸುತ್ತಿರುವುದಿಲ್ಲ.</td>
</tr>
<tr>
<td>ಈ)</td>
<td>ಇದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;</td>
<td><u>ಮಹಿಳೆಯರ ಅಕ್ರಮ ಸಾಗಾಣಿಕೆ ನಿಷೇಧ ಕಾಯ್ದೆ 1956:</u> ಮಹಿಳೆಯರನ್ನು ಅಕ್ರಮವಾಗಿ ಸಾಗಾಣಿಕೆ ಮಾಡುವುದನ್ನು ಈ ಕಾಯ್ದೆಯು ನಿಷೇಧಿಸುತ್ತದೆ ಮತ್ತು ನಿರ್ಬಂಧಿಸುತ್ತದೆ ಹಾಗೂ ಈ ಕಾಯ್ದೆಯಡಿ ಮಹಿಳೆಯರಿಗೆ ರಕ್ಷಣೆಯನ್ನು ಒದಗಿಸಲಾಗಿದೆ.
<br><br>
ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಣಿಕೆ ತಡೆ ಯೋಜನೆಯಡಿ ಗ್ರಾಮ ಪಂಚಾಯತ್ ಮಟ್ಟದಲ್ಲಿ ಮಹಿಳೆಯರ ಮತ್ತು ಮಕ್ಕಳ ರಕ್ಷಣೆಯ ಕಾವಲು ಸಮಿತಿಯನ್ನು ರಚಿಸಲಾಗಿದೆ.</td>
</tr>
</table>

| | | |
|---|---|---|
| | | • ಕಾವಲು ಸಮಿತಿಯ ಸದಸ್ಯರಿಗೆ ಉಪಗ್ರಹ ಆಧಾರಿತ ತರಬೇತಿಯನ್ನು ನೀಡಲು ಕ್ರಮ ವಹಿಸಲಾಗುತ್ತಿದೆ.<br>• ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಣಿಕೆ ತಡೆ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಲು ಕ್ರಮಬದ್ಧ ಕಾರ್ಯವಿಧಾನದ ಮಾರ್ಗಸೂಚಿಗಳನ್ನು (Operational Guidelines-To address Trafficking in Persons) ಮುದ್ರಿಸಿ ಜಿಲ್ಲೆಗಳಿಗೆ ರವಾನಿಸಲಾಗಿದೆ.<br>• "ಮಾನವ ಕಳ್ಳ ಸಾಗಾಣಿಕೆ ತಡೆಗಟ್ಟುವಿಕೆಯಲ್ಲಿ ಕ್ಷೇತ್ರ ಮಟ್ಟದ ಪಾಲುದಾರರ ಪಾತ್ರ" ಕುರಿತು ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು, ಸ್ವಯಂ ಸೇವಾ ಸಂಸ್ಥೆಗಳ ಮುಖ್ಯಸ್ಥರುಗಳಿಗೆ ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ. |
| ಊ) | 11-18 ವರ್ಷದ ಪ್ರಾಯ ಪೂರ್ವ ಬಾಲಕಿಯರ ಸಬಲೀಕರಣಕ್ಕಾಗಿ ಎಲ್ಲೆಲ್ಲಿ ಆರೋಗ್ಯ, ಪೌಷ್ಟಿಕತೆ ಹಾಗೂ ಕೌಶಲ್ಯಾ ಆಧಾರಿತ ಶಿಕ್ಷಣವನ್ನು ನೀಡಲಾಗಿದೆ? (ಸಂಪೂರ್ಣ ಮಾಹಿತಿಯನ್ನು ನೀಡುವುದು) | ಇಲಾಖೆಯ ಸಹಯೋಗದೊಂದಿಗೆ ರೋಟರಿ ಕ್ಲಬ್ ಆಫ್ ಸೆವೆನ್ ಹಿಲ್ಸ್ ರ ವತಿಯಿಂದ, ಶಾಲೆಯಿಂದ ಹೊರಗುಳಿದ 11 ರಿಂದ 14 ವರ್ಷದ 6816 ಪ್ರಾಯ ಪೂರ್ವ ಬಾಲಕಿಯರಿಗೆ ಆರೋಗ್ಯ ನಿರ್ವಹಣೆ ಕುರಿತು ವರ್ಚುಯಲ್ ತರಬೇತಿಯನ್ನು ದಿನಾಂಕ:13.01.2021 ರಂದು ನೀಡಲಾಗಿದೆ.<br>ಶಾಲೆಯಿಂದ ಹೊರಗುಳಿದ 11 ರಿಂದ 14 ವರ್ಷದ ಪ್ರಾಯ ಪೂರ್ವ ಬಾಲಕಿಯರಿಗೆ National Institute of Public Co-operation (ನಿಪ್ಸಿಡ್) ಸಂಸ್ಥೆ ಬೆಂಗಳೂರು ಆಯೋಜಿಸಿರುವ, ಆರೋಗ್ಯ ಪೌಷ್ಟಿಕತೆ ಹಾಗೂ ಕೌಶಲ್ಯ ಆಧಾರಿತ ಶಿಕ್ಷಣದ ತರಬೇತಿಯನ್ನು ದಿನಾಂಕ:21.01.2021 ರಿಂದ 22.01.2021 ಹಾಗೂ24.02.2021 ರಿಂದ 25.02.2021 ರ ವರೆಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಹಾಗೂ ಮೇಲ್ವಿಚಾರಕಿಯರಿಗೆ ಆನ್‌ಲೈನ್ ಮೂಲಕ ತರಬೇತಿಯನ್ನು ನೀಡಲಾಗಿದೆ.<br>ನಿಪ್ಸಿಡ್ ಸಂಸ್ಥೆ ಬೆಂಗಳೂರು ಆಯೋಜಿಸಿರುವ, Online Organization Programme on Life Skill Education for Adolescent Girls (SAG) for functionaries of Anganwadi Services Scheme (ASS) ಕುರಿತು ದಿನಾಂಕ:17.06.2021 ಹಾಗೂ 18.06.2021 ರಂದು ಆನ್‌ಲೈನ್ ಮೂಲಕ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ತರಬೇತಿಯನ್ನು ನೀಡಲಾಗಿದೆ. |

ಮಮಇ/35/ಮಅನಿ/2022

Halappa

(ಹಾಲಪ್ಪ ಬಸಪ್ಪ ಆಚಾರ್)
ಮಾನ್ಯ ಗಣಿ ಮತ್ತು ಭೂವಿಜ್ಞಾನ, ಮಹಿಳಾ ಮತ್ತು
ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ ಹಾಗೂ
ಹಿರಿಯ ನಾಗರೀಕರ ಸಬಲೀಕರಣ ಸಚಿವರು.

## ಅನುಬಂಧ (1 ಎ)

## ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವತಿಯಿಂದ ಅನುಷ್ಠಾನಗೊಳ್ಳುತ್ತಿರುವ ಯೋಜನೆಗಳ ವಿವರ.

**1. ಉದ್ಯೋಗಿನಿ ಯೋಜನೆ :-**

ಮಹಿಳೆಯರು ಆದಾಯ ಉತ್ಪನ್ನಕರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಸ್ವಯಂ ಉದ್ಯೋಗಿಗಳಾಗಲು ಬ್ಯಾಂಕ್ ಮೂಲಕ ಸಾಲ ಮತ್ತು ನಿಗಮದ ಮೂಲಕ ಸಹಾಯಧನವನ್ನು ನೀಡಲಾಗುತ್ತದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಸಾಲದ ಘಟಕ ವೆಚ್ಚ ಕನಿಷ್ಟ ರೂ.1.00 ಲಕ್ಷದಿಂದ ಗರಿಷ್ಟ ರೂ.3.00 ಲಕ್ಷಗಳು, ಸಹಾಯಧನದ ಮೊತ್ತ 50 ರಷ್ಟು, ಗರಿಷ್ಟ ರೂ.1,50,000/- ಕುಟುಂಬದ ವಾರ್ಷಿಕ ಆದಾಯದ ಗರಿಷ್ಟ ಮಿತಿ ರೂ.2.00 ಲಕ್ಷಗಳು.

ಸಾಮಾನ್ಯ ವರ್ಗ ಮತ್ತು ವಿಶೇಷ ವರ್ಗದ ಫಲಾನುಭವಿಗಳಿಗೆ ಸಾಲದ ಘಟಕ ವೆಚ್ಚ ರೂ.1.00ಲಕ್ಷ ರೂ ಗಳಿಂದ ರೂ. 3.00 ಲಕ್ಷಗಳು, ಸಹಾಯಧನದ ಮೊತ್ತ ಶೇ.30 ರಷ್ಟು ಗರಿಷ್ಟ ರೂ.90,000/-. ಕುಟುಂಬದ ವಾರ್ಷಿಕ ಆದಾಯದ ಗರಿಷ್ಟ ಮಿತಿ ರೂ.1.50 ಲಕ್ಷಗಳು. ಎಲ್ಲಾ ವರ್ಗದ ಮಹಿಳೆಯರಿಗೆ ವಯೋಮಿತಿ 18 ರಿಂದ 55 ವರ್ಷಗಳು.

**2. ಕಿರುಸಾಲ ಯೋಜನೆ:-**

ಈ ಯೋಜನೆಯಡಿಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಸ್ತ್ರೀಶಕ್ತಿ ಯೋಜನೆಯಡಿ ರಚನೆಗೊಂಡ ಸ್ತ್ರೀ ಶಕ್ತಿ ಸ್ವ-ಸಹಾಯ ಸಂಘಗಳು ಆರ್ಥಿಕವಾಗಿ ಸಬಲರಾಗಲು ಪ್ರತಿ ಸ್ತ್ರೀ ಶಕ್ತಿ ಸ್ವ-ಸಹಾಯ ಸಂಘಕ್ಕೆ ನಿಗಮದ ವತಿಯಿಂದ ಬಡ್ಡಿ ರಹಿತ ಸಾಲ ಒದಗಿಸುವುದು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸ್ತ್ರೀ ಶಕ್ತಿ ಸಂಘಕ್ಕೆ ರೂ.1.00 ಲಕ್ಷದಿಂದ ರೂ. 3.00 ಲಕ್ಷಗಳವರೆಗೆ ಮತ್ತು ಇತರೆ ವರ್ಗದ ಸ್ತ್ರೀ ಶಕ್ತಿ ಸ್ವ-ಸಹಾಯ ಸಂಘಗಳಿಗೆ ರೂ.1.00 ಲಕ್ಷದಿಂದ ರೂ. 2.00 ಲಕ್ಷಗಳವರೆಗೆ ಬಡ್ಡಿ ರಹಿತ ಸಾಲ ಒದಗಿಸಲಾಗುತ್ತದೆ.

**3. ಸಮೃದ್ಧಿ ಯೋಜನೆ:-**

ಬೀದಿ ಬದಿಯಲ್ಲಿ ಸಣ್ಣ ವ್ಯಾಪಾರ ನಡೆಸುತ್ತಿರುವ ಬಡತನ ರೇಖೆಗಿಂತ ಕೆಳಗಿರುವ ಮಹಿಳೆಯರಿಗೆ ರೂ.10,000/-ಗಳ ಪ್ರೋತ್ಸಾಹಧನವನ್ನು ಒದಗಿಸಲಾಗುತ್ತದೆ. 2020-21ನೇ ಸಾಲಿನಿಂದ ಸರ್ಕಾರದಿಂದ ಅನುದಾನ ಹಂಚಿಕೆ ಆಗಿರುವುದಿಲ್ಲ.

**4. ಚೇತನ ಯೋಜನೆ:-**

ದಮನಿತ ಮಹಿಳೆಯರು ಆದಾಯೋತ್ಪನ್ನ ಚಟುವಟಿಕೆ ಕೈಗೊಳ್ಳಲು ಅನುವಾಗುವಂತೆ ನಿಗಮದಿಂದ ನೇರವಾಗಿ ಪ್ರೋತ್ಸಾಹಧನ ಮೊತ್ತ ರೂ.30,000/-ಗಳನ್ನು ಉದ್ಯಮಶೀಲತಾ ಅಭಿವೃದ್ಧಿ ತರಬೇತಿಯೊಂದಿಗೆ ನೀಡಲಾಗುತ್ತದೆ.

**5. ಧನಶ್ರೀ ಯೋಜನೆ:-**

18 ರಿಂದ 60 ವಯೋಮಾನದ ಹೆಚ್.ಐ.ವಿ ಸೋಂಕಿತ ಮಹಿಳೆಯರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ನಿಗಮದಿಂದ ನೇರವಾಗಿ ಪ್ರೋತ್ಸಾಹಧನ ಮೊತ್ತ ರೂ.30,000/-ಗಳಆರ್ಥಿಕ ಸೌಲಭ್ಯವನ್ನು ಉದ್ಯಮಶೀಲತಾ ಅಭಿವೃದ್ಧಿ ತರಬೇತಿಯೊಂದಿಗೆ ಒದಗಿಸಲಾಗುತ್ತಿದೆ.

**6. ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆ:-**

ಲಿಂಗತ್ವ ಅಲ್ಪಸಂಖ್ಯಾತರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸಲು ಆದಾಯೋತ್ಪನ್ನಕರ ಚಟುವಟಿಕೆ ಕೈಗೊಳ್ಳುವ ಉದ್ದೇಶಕ್ಕಾಗಿ ನಿಗಮದಿಂದ ನೇರವಾಗಿ ಪ್ರೋತ್ಸಾಹಧನ ಮೊತ್ತ ರೂ.30,000/-ಗಳ ಆರ್ಥಿಕ ಸೌಲಭ್ಯವನ್ನು ಉದ್ಯಮ ಶೀಲತಾ ಅಭಿವೃದ್ಧಿ ತರಬೇತಿಯೊಂದಿಗೆ ನೀಡಲಾಗುತ್ತದೆ.

7. **ಮಹಿಳಾ ತರಬೇತಿ ಯೋಜನೆ:-**

ಆರ್ಥಿಕವಾಗಿ ಹಿಂದುಳಿದ ಮಹಿಳೆಯರು, ದಮನಿತ ಮಹಿಳೆಯರು ಮತ್ತು ವಿಶೇಷ ವರ್ಗದವರಿಗೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಮಹಿಳೆಯರಿಗೆ ಕೌಶಲ್ಯ ತರಬೇತಿ ನೀಡಿ, ಅವರಲ್ಲಿ ಉದ್ಯಮಶೀಲತೆಯನ್ನು ಬೆಳೆಸುವ ಗುರಿಯನ್ನು ಹೊಂದಲಾಗಿದೆ.

8. **ಬಡ್ಡಿ ಸಹಾಯಧನ ಯೋಜನೆ (ಕರ್ನಾಟಕ ರಾಜ್ಯ ಆರ್ಥಿಕ ಹಣಕಾಸು ನಿಗಮ ಮೂಲಕ) :-**

ಕರ್ನಾಟಕ ರಾಜ್ಯ ಹಣಕಾಸು ನಿಗಮದ ಮೂಲಕ ಕನಿಷ್ಠ ರೂ.5.00 ಲಕ್ಷದಿಂದ ರೂ.200.00 ಲಕ್ಷಗಳ ಸಾಲವನ್ನು ಹಾಗೂ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಶೇ. 10ರಷ್ಟು ಬಡ್ಡಿ ಸಹಾಯಧನವನ್ನು ಸಣ್ಣ/ ಮಧ್ಯಮ ಕೈಗಾರಿಕೆ ಹಾಗೂ ಸೇವಾ ಘಟಕಗಳನ್ನು ಪ್ರಾರಂಭಿಸಿ ಉದ್ಯೋಗ ಚಟುವಟಿಕೆಗಳಲ್ಲಿ ತೊಡಗುವ ಮಹಿಳಾ ಉದ್ದಿಮೆದಾರರನ್ನು ಪ್ರೋತ್ಸಾಹಿಸುವ ಸಲುವಾಗಿ ನೀಡಲಾಗುತ್ತಿದೆ.

9. **ಮಾಜಿ ದೇವದಾಸಿ ಮಹಿಳೆಯರ ಪುನರ್ವಸತಿ ಯೋಜನೆ :-**

ಆರ್ಥಿಕವಾಗಿ ಮಾಜಿ ದೇವದಾಸಿಯರನ್ನು ಸಬಲೀಕರಣಗೊಳಿಸಲು ಆದಾಯೋತ್ಪನ್ನಕರ ಚಟುವಟಿಕೆ ಕೈಗೊಳ್ಳುವ ಉದ್ದೇಶಕ್ಕಾಗಿ ನಿಗಮದಿಂದ ನೇರವಾಗಿ ಪ್ರೋತ್ಸಾಹಧನ ಮೊತ್ತ ರೂ.30,000/-ಗಳ ಆರ್ಥಿಕ ಸೌಲಭ್ಯವನ್ನು ಇ.ಡಿ.ಪಿ ತರಬೇತಿಯೊಂದಿಗೆ ನೀಡಲಾಗುತ್ತಿದೆ ಹಾಗೂ ದೇವದಾಸಿ ಪದ್ಧತಿಯ ನಿರ್ಮೂಲನೆಗಾಗಿ ಅರಿವು ಮೂಡಿಸುವ ಕಾರ್ಯಕ್ರಮಗಳು, ಕಾನೂನು ಶಿಬಿರ ಹಾಗೂ ಮಾಜಿ ದೇವದಾಸಿ ಮಹಿಳೆಯರಿಗಾಗಿ ಆರೋಗ್ಯ ಶಿಬಿರಗಳನ್ನು ಕೈಗೊಳ್ಳಲಾಗುತ್ತಿದೆ.

10. **ಮಾಜಿ ದೇವದಾಸಿಯರಿಗೆ ಮಾಸಾಶನ:-**

45 ವರ್ಷ ಮೀರಿದ ಮಾಜಿ ದೇವದಾಸಿಯರಿಗೆ ಜೀವನ ನಡೆಸಲು ಸಹಕಾರಿಯಾಗುವಂತೆ, ರೂ. 1500/-ಗಳ ಮಾಸಾಶನವನ್ನು ನೀಡಲಾಗುತ್ತಿದೆ.

11. **ಮಾಜಿ ದೇವದಾಸಿಯರಿಗೆ ವಸತಿ ಯೋಜನೆ :-**

ನಿವೇಶನವುಳ್ಳ ವಸತಿ ರಹಿತ ಮಾಜಿ ದೇವದಾಸಿ ಮಹಿಳೆಯರಿಗೆ ವಸತಿ ಯೋಜನೆಯನ್ನು ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮದ ಮುಖಾಂತರ ಘಟಕ ವೆಚ್ಚ ಗ್ರಾಮಾಂತರ ಪ್ರದೇಶದಲ್ಲಿ ರೂ.1.75 ಲಕ್ಷ ಹಾಗೂ ನಗರ ಪ್ರದೇಶದಲ್ಲಿ ರೂ.2.00 ಲಕ್ಷ ಅನುದಾನದಲ್ಲಿ ಅನುಷ್ಠಾನ ಮಾಡಲಾಗುತ್ತಿದೆ.

## ಅನುಬಂಧ-1B

### ಸ್ತ್ರೀಶಕ್ತಿ ಯೋಜನೆಯಡಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ವಿವರ:

ಸ್ವ-ಸಹಾಯ ಗುಂಪುಗಳ ಮೂಲಕ ಮಹಿಳೆಯರ ಸಬಲೀಕರಣದ ಧ್ಯೇಯದೊಂದಿಗೆ 2000-2001ನೇ ಸಾಲಿನಲ್ಲಿ ಸ್ತ್ರೀಶಕ್ತಿ ಯೋಜನೆಯನ್ನು ಅನುಷ್ಠಾನಗೊಳಿಸಲಾಯಿತು. ಸ್ತ್ರೀಶಕ್ತಿ ಯೋಜನೆಯಡಿ ಅಂಗನವಾಡಿ ಕಾರ್ಯಕರ್ತೆಯರ ಮೂಲಕ ಸಮಾಜದ ಬಡ ಕುಟುಂಬದ, ಸಾಮಾಜಿಕ ಅಥವಾ ಆರ್ಥಿಕ ಹಿನ್ನೆಲೆಯುಳ್ಳ ಸಮಾನ ಮನಸ್ಸಿನ ಪರಸ್ಪರ ವಿಶ್ವಾಸದಿಂದ ಕೂಡಿರುವ ಭೂರಹಿತ ಮಹಿಳಾ ಕೃಷಿ ಕಾರ್ಮಿಕರು, ಪರಿಶಿಷ್ಟ ಜಾತಿ ಅಥವಾ ವರ್ಗಕ್ಕೆ ಸೇರಿದ ಕುಟುಂಬದ 15-20 ಮಹಿಳೆಯರನ್ನು ಒಟ್ಟು ಸೇರಿಸಿ 165960 ಲಕ್ಷ ಗುಂಪುಗಳನ್ನು ರಚಿಸಲು ಹಂತ ಹಂತವಾಗಿ ಮಂಜೂರಾತಿ ನೀಡಲಾಗಿದೆ. ಈ ಗುಂಪುಗಳಲ್ಲಿ ಒಟ್ಟು ಇಲ್ಲಿಯವರೆಗೆ ಸುಮಾರು 25.85 ಲಕ್ಷ ಮಹಿಳಾ ಸದಸ್ಯರನ್ನು ಒಗ್ಗೂಡಿಸಲಾಗಿದೆ.

### ಯೋಜನೆಯ ಧ್ಯೇಯೋದ್ದೇಶ:-

1. ಮಹಿಳೆಯರಿಗೆ ಆರ್ಥಿಕ ಪ್ರಗತಿಯನ್ನು ಸಾಧಿಸುವಂತಹ ಹಾಗೂ ಸಾಮಾಜಿಕ ಬದಲಾವಣೆಗೆ ಸೂಕ್ತ ವಾತಾವರಣವನ್ನು ಮೂಡಿಸುವಂತಹ ಪ್ರಕ್ರಿಯೆಯನ್ನು ಬಲಪಡಿಸುವುದು.
2. ಮಹಿಳೆಯರಲ್ಲಿ ಆತ್ಮವಿಶ್ವಾಸ ಮತ್ತು ಸ್ವಾವಲಂಬನೆ ಮೂಡಿಸಿ ಸಂಪನ್ಮೂಲಗಳ ಮೇಲೆ ಹತೋಟಿ ಹಾಗೂ ಸಾಮಿಪ್ಯವನ್ನು ಸಾಧಿಸುವುದು.
3. ಆದಾಯೋತ್ಪನ್ನ ಚಟುವಟಿಕೆಗಳಲ್ಲಿ ಮಹಿಳೆಯರನ್ನು ತೊಡಗಿಸುವುದರ ಮೂಲಕ ಬಡಮಹಿಳೆಯರ ಆದಾಯವನ್ನು ಹೆಚ್ಚಿಸಿ, ಅವರಲ್ಲಿ ಆರ್ಥಿಕ ಸ್ಥಿರತೆಯನ್ನು ಮೂಡಿಸುವುದು ತನ್ಮೂಲಕ ಬಡತನ ನಿವಾರಣೆ ಮಾಡುವುದು.
4. ವಿವಿಧ ಇಲಾಖೆಗಳನ್ನು ಒಮ್ಮುಖಗೊಳಿಸುವುದರ ಮೂಲಕ ಮಹಿಳಾ ಗುಂಪಿನ ಸದಸ್ಯರುಗಳಿಗೆ ವಿವಿಧ ಇಲಾಖೆಗಳ ಅಭಿವೃದ್ಧಿ ಕಾರ್ಯಕ್ರಮಗಳ ಫಲ ದೊರೆಯುವಂತೆ ಅವಕಾಶ ಕಲ್ಪಿಸುವುದು ಹಾಗೂ ಸಾಲ ನೀಡುವಂತಹ ಸಂಸ್ಥೆಗಳಿಗೆ ಸಾಮೀಪ್ಯ ಒದಗಿಸುವುದರ ಜೊತೆಗೆ ಸಾಲ ದೊರೆಯುವಂತೆ ಕ್ರಮ ಕೈಗೊಳ್ಳುವುದು.

### ಗುಂಪಿನ ಉಳಿತಾಯ ಹಾಗೂ ಆಂತರಿಕ ಸಾಲ:-

ಸ್ತ್ರೀಶಕ್ತಿ ಗುಂಪುಗಳ ಸದಸ್ಯರು ಪ್ರತಿ ಮಾಹೆ ನಿಗದಿತವಾಗಿ ಉಳಿತಾಯ ಮಾಡಿ ಸದರಿ ಉಳಿತಾಯದ ಮೊತ್ತವನ್ನು ಸದಸ್ಯರು ವೈಯುಕ್ತಿಕ ಸಾಲ ಹಾಗೂ ಆದಾಯೋತ್ಪನ್ನ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಬಳಸುತ್ತಿದ್ದು ಸದಸ್ಯರು ಪಡೆದ ಸಾಲವನ್ನು ಸಕಾಲಕ್ಕೆ ಮರುಪಾವತಿ ಮಾಡುತ್ತಾರೆ. ಇದರಿಂದಾಗಿ ಹೆಚ್ಚಿನ ಬಡ್ಡಿ ದರದಲ್ಲಿ ಹೊರಗಡೆಯಿಂದ ಸಾಲ ಪಡೆಯುವುದನ್ನು ತಪ್ಪಿಸಲಾಗಿದೆ.

### ಸುತ್ತು ನಿಧಿ :-

ಆದಾಯೋತ್ಪನ್ನ ಚಟುವಟಿಕೆಗಾಗಿ ಪ್ರತಿ ಸ್ತ್ರೀಶಕ್ತಿ ಗುಂಪಿಗೆ ತಲಾ ರೂ.5000/- ದಂತೆ ಸುತ್ತುನಿಧಿಯನ್ನು ಹಂತಹಂತವಾಗಿ ನೀಡಲಾಗುತ್ತಿದೆ.

### ಕಿಟ್ ಸಾಮಗ್ರಿ:-

ಪ್ರತಿ ಗುಂಪಿಗೆ ರೂ.600/- ರಂತೆ ಅವಶ್ಯವಿರುವ 9 ಪುಸ್ತಕ ಹಾಗೂ ಟ್ರಂಕ್‌ಗಳನ್ನೊಳಗೊಂಡ ಕಿಟ್‌ನ್ನು ಎಲ್ಲಾ ಗುಂಪುಗಳಿಗೂ ವಿತರಿಸಲಾಗಿದೆ.

### ಆದಾಯೋತ್ಪನ್ನ ಚಟುವಟಿಕೆಗಳಲ್ಲಿ ತೊಡಗಿರುವ ಗುಂಪುಗಳಿಗೆ ಪ್ರೋತ್ಸಾಹಧನ:-

ಸ್ತ್ರೀಶಕ್ತಿ ಗುಂಪುಗಳು ವಿವಿಧ ಆದಾಯೋತ್ಪನ್ನ ಚಟುವಟಿಕೆಗಳಲ್ಲಿ ತೊಡಗಿ ಆರ್ಥಿಕವಾಗಿ ಸಬಲರಾಗುತ್ತಿದ್ದಾರೆ. ಆದಾಯೋತ್ಪನ್ನ ಚಟುವಟಿಕೆಗಳಲ್ಲಿ ಕೃಷಿ ಆಧಾರಿತ ಚಟುವಟಿಕೆಗಳಾದ ಮಲ್ಲಿಗೆ ಹೂ, ನರ್ಸರಿ, ತರಕಾರಿ, ಇತರೆ ವ್ಯಾಪಾರಿ ಹೂಗಳ, ಹಣ್ಣು, ಅಣಬೆ ಬೆಳೆಯುವುದು, ಎರೆಹುಳು ಗೊಬ್ಬರ ತಯಾರಿಕೆ, ಇತ್ಯಾದಿ ಮತ್ತು ಕೃಷೀಯೇತರ ಚಟುವಟಿಕೆಗಳಲ್ಲಿ

ಸಿದ್ಧ ಉಡುಪು, ಉಪ್ಪಿನ ಕಾಯಿ, ಹಪ್ಪಳ, ಸಾಂಬಾರುಪುಡಿ ತಯಾರಿಕೆ, ಕಂಬಳಿ ನೇಯ್ಗೆ, ಬ್ಯೂಟಿಪಾರ್ಲರ್, ಎಲೆಕ್ಟ್ರಾನಿಕ್ ವಸ್ತುಗಳ ರಿಪೇರಿ, ಎಂಬ್ರಾಯಿಡರಿ, ಫ್ಯಾಷನ್ ಡಿಸೈನಿಂಗ್, ಸಣ್ಣ ವ್ಯಾಪಾರ ಇತ್ಯಾದಿ ಚಟುವಟಿಕೆಗಳಲ್ಲಿ ತೊಡಗಿರುತ್ತಾರೆ.

ಗುಂಪಿನ ಸದಸ್ಯರು ಉತ್ಪಾದಿಸುವ ವಸ್ತುಗಳಿಗೆ ಸೂಕ್ತ ಮಾರುಕಟ್ಟೆ ಕಲ್ಪಿಸಲು ಇಲಾಖೆಯ ಮೂಲಕ ಬ್ರಾಂಡ್ ಕೂಡ ಬಿಡುಗಡೆ ಮಾಡಲಾಗಿದೆ. ಆದಾಯೋತ್ಪನ್ನ ಚಟುವಟಿಕೆಯಲ್ಲಿ ತೊಡಗಿರುವ ಸ್ತ್ರೀಶಕ್ತಿ ಗುಂಪುಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಗುಂಪುಗಳಿಗೆ ತಲಾ ರೂ. 5,000/-ದಂತೆ ಪ್ರೋತ್ಸಾಹಧನ ನೀಡಲಾಗುತ್ತಿದೆ.

## ಅಧಿಕ ಉಳಿತಾಯ ಮಾಡಿರುವ ಗುಂಪುಗಳಿಗೆ ಪ್ರೋತ್ಸಾಹಧನ:-

ಗುಂಪುಗಳಲ್ಲಿ ಉಳಿತಾಯ ಮನೋಭಾವನೆಯನ್ನು ಪ್ರೋತ್ಸಾಹಿಸಲು, ರೂ.75,000/- ದಿಂದ ರೂ. 1.00 ಲಕ್ಷದವರೆಗೆ ಉಳಿತಾಯ ಮಾಡಿರುವ ಗುಂಪುಗಳಿಗೆ ತಲಾ ರೂ.15000/- ಗಳ ಹಾಗೂ ರೂ. 1.00 ಲಕ್ಷಕ್ಕೂ ಹೆಚ್ಚು ಉಳಿತಾಯ ಮಾಡಿರುವ ಗುಂಪುಗಳಿಗೆ ತಲಾ ರೂ.20,000ಗಳ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.

## ಸಾಲದ ಮೇಲಿನ ಬಡ್ಡಿಗೆ ಶೇಕಡ 6ರ ಸಹಾಯ ಧನ:-

ರೂ.25,000/-ದಿಂದ 1.00 ಲಕ್ಷದವರೆಗೆ ಸಾಲವನ್ನು ಪಡೆಯುವ ಸ್ತ್ರೀಶಕ್ತಿ ಗುಂಪುಗಳಿಗೆ, ಸಾಲದ ಮೇಲಿನ ಬಡ್ಡಿ ದರಕ್ಕೆ ಶೇಕಡ 6ರ ಸಹಾಯಧನವನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ.

## ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳ:-

ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳಗಳನ್ನು ಏರ್ಪಡಿಸಲು ಪ್ರತಿ ಜಿಲ್ಲೆಗೆ ಪ್ರತಿ ವರ್ಷ ರೂ.75,000 ಗಳನ್ನು ಬಿಡುಗಡೆಗೊಳಿಸಲಾಗಿದೆ. ಮಹಿಳಾ ದಿನಾಚರಣೆ ಸಂದರ್ಭದಲ್ಲಿ ರಾಜ್ಯ ಮಟ್ಟದಲ್ಲಿ ನಡೆಯುವ ವಸ್ತು ಪ್ರದರ್ಶನ ಹಾಗೂ ಮಾರಾಟ ಮೇಳದಲ್ಲಿ ಮತ್ತು ಕೃಷಿ ಮೇಳಗಳಲ್ಲಿಯೂ ಸ್ತ್ರೀಶಕ್ತಿ ಗುಂಪುಗಳು ಉತ್ಪಾದಿಸುವ ವಸ್ತುಗಳನ್ನು ಮಾರಾಟ ಮಾಡಲು ಅವಕಾಶ ಕಲ್ಪಿಸಲಾಗುತ್ತಿದೆ.

## ತಾಲ್ಲೂಕು ಮಟ್ಟದ ಬ್ಲಾಕ್ ಸೊಸೈಟಿ ಫೆಡರೇಷನ್:-

175 ತಾಲ್ಲೂಕುಗಳಲ್ಲಿ ತಾಲ್ಲೂಕು ಮಟ್ಟದ ಬ್ಲಾಕ್ ಸೊಸೈಟಿ ಫೆಡರೇಷನ್‌ಗಳನ್ನು ರಚಿಸಿ, ಸಹಕಾರ ಇಲಾಖೆಯ ಸೊಸೈಟಿ ಕಾಯ್ದೆ 1960 ರಡಿ ನೊಂದಾಯಿಸಲಾಗಿದ್ದು ಪ್ರತಿ ವರ್ಷ ಫೆಡರೇಷನ್‌ಗೆ ರೂ.30000/-ಗಳಂತೆ ಅವುಗಳ ಬಲವರ್ಧನೆಗಾಗಿ ತಲಾ ರೂ. ಒಟ್ಟು ರೂ.30000/- ಬಿಡುಗಡೆ ಮಾಡಲಾಗಿದೆ. ಒಕ್ಕೂಟದ ಪ್ರತಿನಿಧಿಗಳಿಗೆ ರಾಜ್ಯ ಮಟ್ಟದಲ್ಲಿ ಬಲವರ್ಧನೆಗಾಗಿ ಬಿಡುಗಡೆಗೊಳಿಸಿರುವ ಅನುದಾನದ ಉಪಯೋಗದ ಕುರಿತು 1 ದಿನದ ತರಬೇತಿಯನ್ನು ನೀಡಲಾಗಿದೆ.

## ಅತ್ಯುತ್ತಮ ಸ್ತ್ರೀಶಕ್ತಿ ಗುಂಪುಗಳ ಪ್ರಶಸ್ತಿ:-

ಪ್ರತಿ ವರ್ಷ ಮಾರ್ಚ್ 8ರಂದು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಂದು ರಾಜ್ಯದಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಸ್ತ್ರೀಶಕ್ತಿ ಗುಂಪುಗಳನ್ನು ಪ್ರೋತ್ಸಾಹಿಸಲು ಗುಂಪುಗಳನ್ನು ಗುರುತಿಸಿ, ತಾಲ್ಲೂಕು ಮಟ್ಟದಲ್ಲಿ ತಲಾ ರೂ.2000/-, ಜಿಲ್ಲಾ ಮಟ್ಟದಲ್ಲಿ ರೂ.5000/-, ಮತ್ತು ರಾಜ್ಯ ಮಟ್ಟದಲ್ಲಿ ಮೊದಲನೇ ಅತ್ಯುತ್ತಮ ಗುಂಪಿಗೆ ರೂ.50,000/-, ಎರಡನೇ ಅತ್ಯುತ್ತಮ ಗುಂಪಿಗೆ ರೂ.30,000/- ಮತ್ತು ಮೂರನೇ ಅತ್ಯುತ್ತಮ ಗುಂಪಿಗೆ ರೂ.20,000/- ನಗದು ಬಹುಮಾನದೊಂದಿಗೆ ಪ್ರಶಸ್ತಿ ಪತ್ರಗಳನ್ನು ನೀಡಿ ಗೌರವಿಸಲಾಗುತ್ತಿದೆ.

ಶ್ರೀಮತಿ. ಯಶೋಧರಮ್ಮ ದಾಸಪ್ಪ ಇವರ ಹೆಸರಿನಲ್ಲಿ ನಾಲ್ಕು ಅತ್ಯುತ್ತಮ ಸ್ತ್ರೀಶಕ್ತಿ ಗುಂಪುಗಳನ್ನು ನಾಲ್ಕು ಕಂದಾಯ ವಿಭಾಗಗಳಿಂದ ಗುರುತಿಸಿ ತಲಾ ರೂ.25,000/- ಹಾಗೂ ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಗುತ್ತಿದೆ.

## ತಾಲ್ಲೂಕು ಒಕ್ಕೂಟಗಳಿಗೆ ಪ್ರಶಸ್ತಿ:

2010-2011ನೇ ಸಾಲಿನಿಂದ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ತಾಲ್ಲೂಕು ಒಕ್ಕೂಟಗಳಿಗೆ ರಾಜ್ಯ ಮಟ್ಟದಲ್ಲಿ 3 ಪ್ರಶಸ್ತಿಗಳನ್ನು ನೀಡುವ ಯೋಜನೆಯನ್ನು ಜಾರಿಗೊಳಿಸುತ್ತಿದ್ದು, ಅದರಂತೆ, ಮೊದಲನೇ ಅತ್ಯುತ್ತಮ ಒಕ್ಕೂಟಕ್ಕೆ ರೂ.80,000/-, ಎರಡನೇ ಅತ್ಯುತ್ತಮ ಒಕ್ಕೂಟಕ್ಕೆ ರೂ.70,000/-, ಮೂರನೇ ಅತ್ಯುತ್ತಮ ಒಕ್ಕೂಟಕ್ಕೆ ರೂ.60,000/- ನಗದು ಬಹುಮಾನದೊಂದಿಗೆ ಪ್ರಶಸ್ತಿಪತ್ರಗಳನ್ನು ನೀಡಿ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ದಿನದಂದು ಗೌರವಿಸಲಾಗುತ್ತದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲೆಗೊಂದು ಅತ್ಯುತ್ತಮ ತಾಲ್ಲೂಕು ಒಕ್ಕೂಟಕ್ಕೆ ರೂ.10,000/- ನಗದು ಬಹುಮಾನದೊಂದಿಗೆ ಪ್ರಶಸ್ತಿ ಪತ್ರವನ್ನು ನೀಡಿ ಗೌರವಿಸಲಾಗುತ್ತಿದೆ.

**ತರಬೇತಿ:-**

ಸ್ತ್ರೀಶಕ್ತಿ ಯೋಜನೆಯ ಅನುಷ್ಠಾನದ ಬಗ್ಗೆ ಕ್ಷೇತ್ರ ಮಟ್ಟದಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳು ಸಿಬ್ಬಂದಿ,ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಗುಂಪಿನ ಸದಸ್ಯರಿಗೆ ಒರಿಯಂಟೇಶನ್, ಲಿಂಗತ್ವ, ನಾಯಕತ್ವ ಸಂವಹನ, ಲೆಕ್ಕ ಪತ್ರ ನಿರ್ವಹಣೆ, ಸಾಲ ನಿರ್ವಹಣೆ ಮತ್ತು ಸಾಮಾಜಿಕ ವಿಷಯಗಳ ಬಗ್ಗೆ ವಿವಿಧ ಹಂತಗಳಲ್ಲಿ ತರಬೇತಿ ನೀಡಲಾಗುತ್ತಿದೆ. ಆದಾಯೋತ್ಪನ್ನ ಚಟುವಟಿಕೆಯನ್ನು ಹಮ್ಮಿಕೊಂಡು ಉತ್ತಮ ಗುಣಮಟ್ಟದ ವಸ್ತುಗಳನ್ನು ಉತ್ಪಾದಿಸಲು ಅನುವಾಗುವಂತೆ ಕೌಶಲ್ಯ ಅಭಿವೃದ್ಧಿ ತರಬೇತಿಯನ್ನು ನೀಡಲಾಗುತ್ತಿದೆ.

ದೀರ್ಘಾವಧಿಯ ಕೌಶಲ್ಯ ತರಬೇತಿಯನ್ನು ಪ್ರತಿ ಗುಂಪಿಗೆ ಇಬ್ಬರು ಸದಸ್ಯರಂತೆ ಒಟ್ಟು 25 ಸದಸ್ಯರ ತಂಡದ 5 ದಿನಗಳ ತರಬೇತಿಯನ್ನು ನೀಡಲಾಗಿದೆ.

**ಗೊಂಚಲು/ಬ್ಲಾಕ್ ಸೊಸೈಟಿ ಬಲವರ್ಧನೆಗಾಗಿ ತರಬೇತಿ:-**

ಸ್ತ್ರೀಶಕ್ತಿ ಗೊಂಚಲು/ ಒಕ್ಕೂಟಗಳ ಬಲವರ್ಧನೆಗಾಗಿ ಸ್ತ್ರೀಶಕ್ತಿ ಗುಂಪಿನ ಸದಸ್ಯರು ಹಾಗೂ ಕ್ಷೇತ್ರಮಟ್ಟದ ಇಲಾಖಾ ಸಿಬ್ಬಂದಿಯವರಿಗೆ ಲಿಂಗತಾರತಮ್ಯ, ನಾಯಕತ್ವ, ಮನಶ್ಚೇತನ, ಸಂವಹನ, ಪುಸ್ತಕ ನಿರ್ವಹಣೆ, ಸಾಲ ನಿರ್ವಹಣೆ ಹಾಗೂ ಸಾಮಾಜಿಕ ವಿಷಯಗಳ ಕುರಿತು 4 ಹಂತಗಳಲ್ಲಿ ತರಬೇತಿ ನೀಡಲಾಗಿದೆ. ನಬಾರ್ಡ್ ಸಂಸ್ಥೆಯ ಸಹಯೋಗದೊಂದಿಗೆ ಒಕ್ಕೂಟದ 1573 ಕಾರ್ಯಕಾರಿ ಸಮಿತಿ ಸದಸ್ಯರಿಗೆ ತರಬೇತಿ ನೀಡಲಾಗಿದೆ.

**ಜಿಲ್ಲಾ ಮಾರುಕಟ್ಟೆ ಸಂಕೀರ್ಣ :**

ಸ್ತ್ರೀಶಕ್ತಿ ಗುಂಪುಗಳು ತಾವು ತಯಾರಿಸಿದ ವಸ್ತುಗಳಿಗೆ ಮಾರುಕಟ್ಟೆ ಸೌಲಭ್ಯವಿಲ್ಲದೆ ತಯಾರಿಸಿದ ಉತ್ಪನ್ನಗಳನ್ನು ಮಾರಾಟ ಮಾಡಲು ಹಾಗೂ ದೊಡ್ಡ ಉದ್ಯಮಿಗಳೊಂದಿಗೆ ಸ್ಪರ್ಧಿಸಲು ಸಾಧ್ಯವಾಗದೇ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಇಲಾಖೆಯು ಗುಂಪುಗಳ ಕೈ ಬಲಪಡಿಸಲು ಸ್ತ್ರೀಶಕ್ತಿ ಭವನ/ ಮಾರುಕಟ್ಟೆ ಮಳಿಗೆಗಳನ್ನು ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ನಿರ್ಮಿಸಲು ಆರ್ಥಿಕ ಸಹಾಯ ನೀಡುವ ಯೋಜನೆಯನ್ನು ಜಾರಿಗೆ ತರಲಾಗಿದ್ದು, 2006-2007ನೇ ಸಾಲಿನಲ್ಲಿ ಜಿಲ್ಲಾ ಮಾರುಕಟ್ಟೆ ಮಳಿಗೆಗಳನ್ನು ನಿರ್ಮಿಸಲು ಪ್ರಾರಂಭಿಸಿದ್ದು, ಇದುವರೆಗೆ 29 ಜಿಲ್ಲೆಗಳಲ್ಲಿ ಜಿಲ್ಲಾ ಮಾರುಕಟ್ಟೆ ಮಳಿಗೆಗಳನ್ನು ನಿರ್ಮಿಸಲಾಗಿದೆ.

**ತಾಲ್ಲೂಕು ಮಾರುಕಟ್ಟೆ ಭವನ / ಮಳಿಗೆಗಳ ನಿರ್ಮಾಣ:-**

ಹೆಚ್ಚಿನ ಪ್ರಮಾಣದಲ್ಲಿ ಗುಂಪುಗಳು ಆದಾಯೋತ್ಪನ್ನ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಸಲುವಾಗಿ ತದನಂತರ ಹಂತ ಹಂತವಾಗಿ ತಾಲ್ಲೂಕು ಮಟ್ಟದಲ್ಲಿ ಮಾರುಕಟ್ಟೆ ಸೌಲಭ್ಯಗಳನ್ನು ಒದಗಿಸುವ ಸಲುವಾಗಿ 166 ತಾಲ್ಲೂಕು ಮಾರಾಟ ಮಳಿಗೆಗಳನ್ನು ಮಂಜೂರು ಮಾಡಲಾಗಿದೆ.

**ವಿಭಾಗೀಯ ಮಟ್ಟದ ತರಬೇತಿ ಕೇಂದ್ರ ನಿರ್ಮಾಣ:**

2010-2011 ರಿಂದ 2012-2013ನೇ ಸಾಲಿನಲ್ಲಿ ಬೆಂಗಳೂರು, ಕಲಬುರ್ಗಿ, ಗದಗ ಮತ್ತು ಮೈಸೂರು ಇಲ್ಲಿ ವಿಭಾಗೀಯ ಮಟ್ಟದ 4 ತರಬೇತಿ ಕೇಂದ್ರಗಳನ್ನು ನಿರ್ಮಿಸಲಾಗಿದೆ.

**ಸ್ತ್ರೀಶಕ್ತಿ ಸಮೃದ್ಧಿ ಯೋಜನೆ:-** ಜಿಲ್ಲಾ ಮಟ್ಟದ ಒಕ್ಕೂಟಗಳನ್ನು ರಚಿಸಿ ಇದರ ಮೂಲಕ ತಾಲ್ಲೂಕು ಮಟ್ಟದ ಸ್ತ್ರೀಶಕ್ತಿ ಒಕ್ಕೂಟ ಹಾಗೂ ಗೊಂಚಲು ಗುಂಪುಗಳನ್ನು ಬಲವರ್ಧನೆಗೊಳಿಸಲು ಹಾಗೂ ಉತ್ತಮ ನಿರ್ವಹಣೆಗಾಗಿ ಗುಂಪುಗಳ ನಡುವೆ ಸಹಕಾರ ಹಾಗೂ ಸಮನ್ವಯತೆಯನ್ನು ಕಾಯ್ದುಕೊಳ್ಳಲು ಜಿಲ್ಲಾ ಮಟ್ಟದ ಒಕ್ಕೂಟಗಳನ್ನು ರಚಿಸಲಾಗಿದೆ.

**ಕೌಶಲ್ಯ/ಉದ್ಯಮಶೀಲತ ತರಬೇತಿಗಳು :-** ಸ್ತ್ರೀಶಕ್ತಿ ಯೋಜನೆಯಡಿ ಆಯ್ದ ಮತ್ತು ಆಸಕ್ತ ಸ್ತ್ರೀಶಕ್ತಿ ಗುಂಪುಗಳಿಗೆ, ಜಿಲ್ಲಾ ಮತ್ತು ತಾಲ್ಲೂಕು ಒಕ್ಕೂಟದ ಪದಾಧಿಕಾರಿಗಳಿಗೆ ಕಾಲಕಾಲಕ್ಕೆ ತರಬೇತಿಗಳನ್ನು ಅನುದಾನ ಲಭ್ಯತೆಗನುಗುಣವಾಗಿ ಹಮ್ಮಿಕೊಳ್ಳಗಾತ್ತಿದೆ. (ಕಂಪ್ಯೂಟರ್, ಸಾಮರ್ಥ್ಯಾಭಿವೃದಿ, ವ್ಯಕ್ತಿತ್ವ ವಿಕಸನ ಅಭಿವೃದ್ಧಿ, ಕೌಶಲ್ಯಾಧಾರಿತ ಮತ್ತು ಉದ್ಯಮಶೀಲತ ತರಬೇತಿ)

**ಅಮೃತ ಕಿರು ಉದ್ದಿಮೆ ಯೋಜನೆ: 2021-22 ನೇ ಸಾಲಿನಲ್ಲಿ** 75 ನೇ ಸ್ವಾತಂತ್ರ್ಯ ಮಹೋತ್ಸವದಂದು ಮಾನ್ಯ ಮುಖ್ಯ ಮಂತ್ರಿಗಳು 7500 ಮಹಿಳಾ ಸ್ವಸಹಾಯ ಗುಂಪುಗಳನ್ನು ಕಿರು ಉದ್ದಿಮೆಗಳನ್ನಾಗಿ ಪರಿವರ್ತಿಸುವ ದೃಷ್ಟಿಯಿಂದ ಪ್ರತಿ ಗುಂಪಿಗೆ ರೂ.1.00 ಲಕ್ಷ ದಂತೆ 75.00 ಕೋಟಿ ಬೀಜಧನ ನೀಡುವ ಅಮೃತ ಸ್ವಸಹಾಯ ಕಿರು ಉದ್ದಿಮೆಗಳ ಯೋಜನೆಯನ್ನು ಘೋಷಣೆ ಮಾಡಿರುತ್ತಾರೆ.

. ಜಿಲ್ಲಾ ಉಸ್ತುವಾರಿ ಅಧ್ಯಕ್ಷತೆಯಲ್ಲಿ ರಚನೆಯಾಗಿರುವ ಆಯ್ಕೆ ಸಮಿತಿಗಳ ಮುಖಾಂತರ ಸ್ವೀಕೃತವಾದ ಪ್ರಸ್ತಾವನೆಗಳಿಗೆ ಮಂಜೂರಾತಿ ನೀಡಲಾಗಿರುತ್ತದೆ. ಸದರಿ ಗುಂಪುಗಳಿಗೆ ಬೀಜಧನ ಬಿಡುಗಡೆ ಮಾಡುವ ಸಲುವಾಗಿ ರೂ.75.00 ಕೋಟಿ ಅನುದಾನವನ್ನು ಮಹಿಳಾ ಅಭಿವೃದ್ಧಿ ನಿಗಮಕ್ಕೆ ಬಿಡುಗಡೆಗೊಳಿಸಲಾಗಿರುತ್ತದೆ.

## ಅನುಬಂಧ- 2

| ರಾಜ್ಯ ಮಹಿಳಾ ನಿಲಯ ಮತ್ತು ಸ್ವೀಕಾರ ಕೇಂದ್ರಗಳಲ್ಲಿ, ಕಳೆದ 3 ವರ್ಷಗಳಲ್ಲಿ ಕೌಟುಂಬಿಕ, ಸಾಮಜಿಕ ಬೆಂಬಲವಿಲ್ಲದ ಹಾಗೂ ಪ್ರತ್ಯೇಕ ಆದಾಯವಿಲ್ಲದಂತಹ ರಕ್ಷಣೆ ಮತ್ತು ಪೋಷಣೆಯ ಅವಶ್ಯಕತೆ ಇರುವ ಮಹಿಳೆಯರಿಗೆ ಒದಗಿಸಲಾದ ಪುನರ್ವಸತಿ ವಿವರ | | | | | | | | | | | |
|---|---|---|---|---|---|---|---|---|---|---|---|
| | | ಆಶ್ರಯ ಪಡೆದ ಒಟ್ಟು ನಿವಾಸಿಯರ | ಪುನರ್ವಸತಿ ವಿವರ | | | | | | | ಸ್ವ-ಇಚ್ಛೆಗೆ ಬಿಡುಗಡೆ | ಮದುವೆ |
| | | | ವಿದ್ಯಾಭ್ಯಾಸಕ್ಕಾಗಿ | ಇತರೆ ಸಂಸ್ಥೆಗೆ ವರ್ಗಾವಣೆ | ಇತರೆ ರಾಜ್ಯಗಳಿಗೆ ವರ್ಗಾವಣೆ | ಇತರೆ ಸಂಸ್ಥೆ(ಸ್ವಾಧಾರಕ್ಕೆ) | ಪೋಷಕರ ವಶಕ್ಕೆ ಬಿಡುಗಡೆ | ಮನೆ ಕೆಲಸಕ್ಕೆ | ಹೊರದೇಶಕ್ಕೆ ವರ್ಗಾವಣೆ | | |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1 | 2018-19 | 1341 | 37 | 48 | 2 | 5 | 503 | 4 | 0 | 0 | 11 |
| 2 | 2019-20 | 1577 | 39 | 31 | 0 | 6 | 720 | 1 | 2 | 0 | 16 |
| 3 | 2020-21 | 1062 | 38 | 22 | 0 | 12 | 296 | 5 | 5 | 3 | 7 |
| 4 | 2021-22(ಫೆಬ್ರವರಿ) | 1363 | 56 | 36 | 7 | 28 | 445 | 3 | 5 | 2 | 1 |
| | ಒಟ್ಟು | 5343 | 170 | 137 | 9 | 51 | 1964 | 13 | 12 | 5 | 35 |